1	2	3	4
24	Amchavady to Bedagalapura road	6.00	do
25	Somasarpete to Amchavadi Tavarekattemole and Kasabahally	9.60	do
26	Venkataishnachatra to Bissalvady *via* Channappanapura	6.40	Metalling to be done
27	Kalanahundi to Shivapura *via* Bedarapura	9.50	do
28	Mudnakudu to join Badnawal Somahally PWD road	4.20	do
29	Harve to Megalahundi	4.80	do
30	Yamagunda to Mudluhosahally *via* Voddarahally	4.80	do
31	Devalapura to Tammadahally	6.00	do
32	Madalawadi to Keelagere	3.20	do
33	Harve to Tammadahally	5.00	do
34	Road from AC road to Bedarapura on to Shivapura on to join GCN road	8.40	do
35	Rechamsally to M. Mukahally	3.00	do
36	Kagalawadi Gulipura Boodamsally *via* Heggadahundi	2.00	do

ಕೊರಟಗೆರೆ ತಾಲ್ಲೂಕಿನಲ್ಲಿ ಹೊಸಕೆರೆ ನಿರ್ಮಾಣ

೩೬೩ (೧೨೦೯) ಶ್ರೀ ಟಿ. ಹೆಚ್. ಹನುಮಂತರಾಯಪ್ಪ (ಬೆಳ್ಳಾವಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ಕೊರಟಗೆರೆ ತಾಲ್ಲೂಕು ನೇಗಲಾಲ ಗ್ರಾಮದಲ್ಲಿ ಹೊಸದಾಗಿ ಕೆರೆ ಕಟ್ಟಲು ಮಂಜೂರಾಗಿರುವ ಹಣವೆಷ್ಟು ? ಹಾಗೂ ಕೆಲಸವನ್ನು ಯಾವಾಗ ಪ್ರಾರಂಭಿಸಲಾಯಿತು ?

(ಆ) ಈಗ ಮಾಡಿರುವ ಕೆಲಸಕ್ಕೆ ಪಾವತಿ ಮಾಡಿರುವ ಹಣವೆಷ್ಟು ?

(ಇ) ಈಗ ಕಾಮಗಾರಿ ನಡೆಯುತ್ತಿದೆಯೇ ? ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

(ಈ) ಕೆರೆಯ ಕಾಮಗಾರಿ ಮುಗಿಸಲು ಬೇಕಾಗುವ ಕಾಲವೆಷ್ಟು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ೪,೪೮,೫೦೦-೦೦ ರೂ. ಗಳು ೧೯೮೦ರ ಆಗಸ್ಟ್ ತಿಂಗಳಲ್ಲಿ ಕೆಲಸವನ್ನು ಪ್ರಾರಂಭಿಸಲಾಯಿತು.

ಆ) ೯೦,೨೭೬-೮೦ ರೂಪಾಯಿಗಳು.

ಇ) ಕಾಮಗಾರಿ ನಡೆಯುತ್ತಿಲ್ಲ, ಕೋರ್ಟಿನ ಆದೇಶದ ಮೇರೆಗೆ ಭೂಮಿ ಸ್ವಾಧೀನಪಡಿಸಿ ಕೊಳ್ಳುವವರಿಗೆ ಕೆಲಸ ನಿಲ್ಲಿಸಲಾಗಿದೆ.

ಈ) ಜಮೀನನ್ನು ಸ್ವಾಧೀನಪಡಿಸಿಕೊಂಡ ಒಂದುವರೆ ವರ್ಷದಲ್ಲಿ ಕೆಲಸವನ್ನು ಪೂರ್ಣಗೊಳಿಸ ಲಾಗುವುದು.

ಚಾಮರಾಜನಗರ ತಾಲ್ಲೂಕಿನ ಬಂದೀಗೌಡನಹಳ್ಳಿ ಕೆರೆ ಮತ್ತು ಕೋಡಿಗನ್ ಕೆರೆಗೆ ಪರಿಹಾರ ಕೊಡುವುದು

೩೬೪ (೧೦೨೦) ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

(ಅ) ಚಾಮರಾಜನಗರ ತಾಲ್ಲೂಕಿನ ಬಂದಿಗೌಡನ ಹಳ್ಳಿಕೆರೆ ಮತ್ತು ಕೋಡಿಗನ್ ಕೆರೆ ನಿರ್ಮಾಣದಿಂದ ಹಾಗೂ ನಾಲೆಗಳಿಂದ ಮುಳುಗಡೆಯಾಗಲಿರುವ ಜಮೀನಿನ ವಿಸ್ತೀರ್ಣವೆಷ್ಟು ?

(ಆ) ಮುಳುಗಡೆಯಾಗುವ ಮತ್ತು ನಾಲಾಗಳಿಗೆ ಬೇಕಾಗುವ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳುವ ಬಗ್ಗೆ ಕ್ರಮ ಜರುಗಿಸಲಾಗಿದೆಯೆ ?

(ಇ) ಮುಳುಗಡೆ ಹಾಗೂ ನಾಲಾಗಳಿಗೆ ಬೇಕಾಗುವ ಜಮೀನುಗಳಿಗೆ ಬೆಳೆ ನಷ್ಟ ಪರಿಹಾರ ಸರ್ಕಾರದವರ ವತಿಯಿಂದ ರೈತರಿಗೆ ಕೊಡಲಾಗಿದೆಯೆ ?

ಈ) ಹಾಗಿದ್ದಲ್ಲಿ ಎಷ್ಟು ಹಣವನ್ನು ಮುಳುಗಡೆ ಪ್ರದೇಶದ ರೈತರಿಗೆ ನೀಡಲಾಗಿದೆ ?

ಉ) ಇನ್ನು ಎಷ್ಟು ಜನರಿಗೆ ಮುಳುಗಡೆ ಪರಿಹಾರ ಹಣವನ್ನು ಕೊಡಬೇಕಾಗಿದೆ ಹಾಗೂ ಯಾವಾಗ ನೀಡಲಾಗುವುದು ?

ಶ್ರೀ ಎನ್.ಆರ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ) ೨೭ ಎಕರೆ ೧೧½ ಗುಂಟೆ.

ಆ) ಹೌದು.

ಇ) ಇಲ್ಲ.

ಈ) ಸ್ವಾಧೀನ ಕ್ರಮಗಳು ಪೂರ್ಣಗೊಂಡ ಮೇಲೆ ಪರಿಹಾರ ಹಣವನ್ನು ಪಾವತಿ ಮಾಡ ಲಾಗುವುದು.

ರಾಜ್ಯದ ಹೆದ್ದಾರಿಗಳ ರಸ್ತೆಗಳ ಬದಿಯಲ್ಲಿ ಗಿಡಗಳನ್ನು ನೆಡುವಿಕೆ

೩೬೫ (೧೨೬೨) ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಬೆಂಗಳೂರು–ಪೂನ ರಾಷ್ಟ್ರೀಯ ಹೆದ್ದಾರಿಯ ಎರಡು ಬದಿಗೆ ಎಷ್ಟು ಕಿಲೋಮೀಟರ್ ಉದ್ದ ಗಿಡಗಳನ್ನು ನೆಡಲಾಗಿದೆ ?

ಆ) ರಾಜ್ಯದಲ್ಲಿ ಇತರ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳ ಎರಡು ಬದಿಗಳಲ್ಲಿ ಎಷ್ಟು ಗಿಡಗಳನ್ನು ಈವರೆಗೆ ನೆಡಲಾಗಿದೆ ?

ಇ) ರಾಜ್ಯದ ಇನ್ನಿತರ ರಸ್ತೆಗಳ ಎರಡೂ ಬದಿಗೆ ಎಷ್ಟು ಗಿಡಗಳನ್ನು ನೆಡಲಾಗಿದೆ ?

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ೨೧೦ ಕಿಲೋಮೀಟರ್‌ನಲ್ಲಿ ೨೧,೦೦೦ ಗಿಡಗಳನ್ನು ನೆಡಲಾಗಿದೆ.

ಆ) ೭,೩೪,೦೦೦ ಗಿಡಗಳನ್ನು ನೆಡಲಾಗಿದೆ.

ಇ) ೧,೫೦,೦೦೦ ಗಿಡಗಳನ್ನು ನೆಡಲಾಗಿದೆ.